**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 11802/2022**

ಸಿ.ಡಬ್ಲ್ಯೂ -4

ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | : | ಮಹಮ್ಮದ ಸಲಿಮುದ್ದೀನ |
| ತಂದೆ:ಗಂಡ | : | ಇಫ್ತೆಕಾರ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ, ಉಪ ವಿಭಾಗ ಕಲಬುರಗಿ |
| ವಾಸಸ್ಥಳ | : | ಕಲಬುರಗಿ |

ದಿನಾಂಕ:09.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು 2017 ರಿಂದ ಇಲ್ಲಿಯವರೆಗೆ ಉಪ ವಿಭಾಗ ಕಲಬುರಗಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

ಅಬಕಾರಿ ಉಪನಿರಿಕ್ಷಕರ ಆದೇಶದ ಮೇರೆಗೆ ಬೆಳಗ್ಗೆ 4.00 ಗಂಟೆಗೆ ಕಲಬುರಗಿಯಿಂದ ಹೊರಟು ಹಿರೋಳ್ಳಿ ಹಾಗೂ ಕಲಬುರಗಿ ಮದ್ಯ ಇರುವ ಢಾಬಾದ ಮೇಲೆ ದಾಳಿ ಮಾಡಿದಾಗ ಅಲ್ಲಿದ್ದ ಇಬ್ಬರು ಓಡಿ ಹೋಗಿರುತ್ತಾರೆ. ಅಲ್ಲಿದ್ದ ಮದ್ಯವನ್ನು ವಶಪಡಿಸಿಕೊಂಡಿರುತ್ತೇವೆ. ಮು.ಮಾ.ಗಳನ್ನು ರಾಸಾಯನಿಕ ಪರಿಕ್ಷೆಗೆ ಜಪ್ತಿಪಡಿಸಿಕೊಂಡು ರಾಸಾಯನಿಕ ಪರಿಕ್ಷೆಗೆ ಮು.ಮಾ.ಗಳನ್ನು ನಾನೇ ತೆಗೆದುಕೊಂಡು ರಾಯಚೂರಿಗೆ ಹೋಗಿ ಮರಳಿ ವರದಿಯನ್ನು ತಂದು ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಈಗ 8 ಕಿಂಗ ಫೀಶರ ಟೀನಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಮು.ಮಾ.1 ಎಂದು, ಸಾಕ್ಷಿಗೆ ಈಗ 4 ಮ್ಯಾಕ ಡಾವಲ್ಸ ವಿಸ್ಕಿ ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಮು.ಮಾ.2 ಎಂದು, ಸಾಕ್ಷಿಗೆ ಈಗ 6 ಒರಿಜನಲ ಚಾಯಸ ವಿಸ್ಕಿ 180 ಎಂಎಲನ ಟೆಟ್ರಾ ಪ್ಯಾಕಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.3, ಮಾಕ್ಯ ಡಾವಲ್ ಟ್ರಿಪಲ ವಿಸ್ಕಿ 4 ಟೆಟ್ರಾ ಪ್ಯಾಕ ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.4 ಎಂದು, ಒರಿಜನಲ ಚಾಯಸ 90 ಎಂಎಲನ 12 ಟೆಟ್ರಾ ಪ್ಯಾಕಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.5 ಎಂದು, ಕಿಂಗ ಫೀಶರ ಸ್ಟ್ರಾಂಗ ಬೀಯರ 11 ಬಾಟಲಿಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.6 ಎಂದು ಗುರುತಿಸಲಾಯಿತು.

**ಪಾ. ಸವಾಲು:- ಆರೋಪಿತರ ಪರ ಕೆ.ವಿ.ಆರ್. ವಕೀಲರಿಂದ:**

ನಮ್ಮ ಮೇಲಾಧಿಕಾರಿಗಳು ಬಾತ್ಮಿ ವಿಷಯವನ್ನು ಬೆಳಗ್ಗೆ 4.00 ಗಂಟೆಗೆ ತಿಳಿಸಿದರು. ಬಾತ್ಮಿ ವಿಷಯ ಬಂದಾಗ ನಾನು ಕಲಬುರಗಿ ಕಚೇರಿಯಲ್ಲಿ ಇದ್ದೆನು. ಅಂದು ನನ್ನ ರಾತ್ರಿ ಕರ್ತವ್ಯ ಇರಲಿಲ್ಲ. ನಾವು ದಾಳಿಗೆ ಇಬ್ಬರು ಪಂಚರು ಹಾಗೂ ಮೂರು ಜನ ಅಧಿಕಾರಿಗಳು ಭಾಗವಹಿಸಿದ್ದೇವು. ರಾತ್ರಿ 4.00 ಗಂಟೆಗೆ ಪಂಚರು ನಮ್ಮೊಂದಿಗೆಸಿ ಇದ್ದರು. ನಾವು ದಾಳಿ ಮಾಡುವ ಮುನ್ನ ಸ್ಥಳಿಯ ವಲಯದವರಿಗೆ ಮಾಹಿತಿಯನ್ನು ನೀಡಿರುತ್ತೇವೆ. ಯಾವ ಮುಖಾಂತರವಾಗಿ ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ನಮ್ಮ ಮೇಲಾಧಿಕಾರಿಗಳಿಗೆ ಗೊತ್ತಿರುತ್ತದೆ. ಸಾಮಾನ್ಯವಾಗಿ ದಾಳಿ ಮಾಡಲು ಹೋಗುವ ಮ್ಮು ನಮ್ಮ ಕಚೇರಿ ವಹಿಯಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಈ ಘಟನೆಯಲ್ಲಿ ದಾಳಿಗೆ ಹೋಗುವ ಮುನ್ನ ನಾವು ವಹಿಯಲ್ಲಿ ನಮೂದಿಸಿರುವುದಿಲ್ಲ. ಕಲಬುಗಿಯಿಂದ ಘಟನಾ ಸ್ಥಳಕ್ಕೆ ನಮ್ಮ ವಾಹನ ಸಂಖ್ಯೆ ಕೆಎ-32/ಜಿ-878 ರಲ್ಲಿ ಹೋಗಿರುತ್ತೇವೆ. ಕಲಬುರಗಿಯಿಂದ ಹಿರೋಳ್ಳಿ ಸುಮಾರು 50-55 ಕಿ.ಮಿ. ಅಂತರದಲ್ಲಿ ಇರುತ್ತದೆ. ಆಳಂದದಿಂದ

ಹಿರೋಳ್ಳಿ 20 ಕಿ.ಮಿ. ಇರುತ್ತದೆ. ನಾವು ಹಿರೋಳ್ಳಿ ಕ್ರಾಸ ತಲುಪಿದಾಗ ಸಮಯ 6.00 ಆಗಿತ್ತು. ಘಟನಾ ಸ್ಥಳದಲ್ಲಿ 2-3 ಜನ ಇದ್ದರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಓಡಿ ಹೋದವರ ವಯಸ್ಸು ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ಓಡಿ ಹೋದವರನ್ನು ಹಿಡಿಯಲು ಪ್ರಯತ್ನಿಸಿದೇವು ಆದರೆ ಅವರು ಸಿಗಲಿಲ್ಲ. ಸ್ಥಳದಲ್ಲಿ ಮು.ಮಾ.ಗಳು ಎಷ್ಟು ಇದ್ದವು ಎಂದು ನಮ್ಮ ಮೆಲಾಧಿಕಾರಿಗಳು ಎಣಿಸಿರುತ್ತಾರೆ. ಮು.ಮಾ.ಗಳನ್ನು ಧಾಬಾ ಒಳಗೆ ಇಟ್ಟಿರುತ್ತಾರೆ. ಧಾಬಾದಲ್ಲಿ ಮು.ಮಾ.ಗಳನ್ನು ಎಲ್ಲಿಂದ ತಂದಿದ್ದರು ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ಮೇಲಾಧಿಕಾರಿಗಳಿಗೆ ಗೊತ್ತು ಎಂದು ಹೇಳುತ್ತಾರೆ. ಮು.ಮಾ.ಗಳನ್ನು ಎಲ್ಲಿಂದ ತಂದಿದ್ದರು ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿರುತ್ತೀರಾ ಎಂದರ ಆದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಾವು ರಾಸಾಯನಿಕ ಪರಿಕ್ಷೆಗೆ ಕಳುಹಿಸಿದ ಮು.ಮಾ.ಗಳು ಎಂಎಲ ಎಷ್ಟು ಎಂದು ಹೇಳಲು ಆಗುವುದಿಲ್ಲ. ರಾಸಾಯನಿಕ ಪರಿಕ್ಷೆಗೆ ಕಳುಹಿಸಿದ ಮು.ಮಾ.ಗಳ ಮೇಲೆ ಮೊಹರ ಹಾಕಿದ್ದೇವು ಆದರೆ ಯಾವ ಮೋಹರ ಹಾಕಿದ್ದೇವು ಎಂದು ನನಗೆ ನೆನಪಿಲ್ಲ. ದಿ.10.01.2022 ರಂದು ರಾಸಾಯನಿಕ ಪರಿಕ್ಷೆಗೆ ತೆಗೆದುಕೊಂಡು ಹೋಗಿ ಮರಳಿ ದಿ.12.01.2022 ರಂದು ವರದಿ ಮು.ಮಾ.ಗಳನ್ನು ತಂದಿರುತ್ತೇನೆ. ವರದಿಯನ್ನು ದೋ.ಪ.ಯೊಂದಿಗೆ ಸಲ್ಲಿಸಿರುತ್ತೇನೆ. ಯಾುವುದೇ ಘಟನೆ ನಡೆಯದಿದ್ದರೂ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಬಕಾರಿ ಉಪನಿರಿಕ್ಷಕರ ಆದೇಶದ ಮೇರೆಗೆ ಬೆಳಗ್ಗೆ 4.00 ಗಂಟೆಗೆ ಕಲಬುರಗಿಯಿಂದ ಹೊರಟು ಹಿರೋಳ್ಳಿ ಹಾಗೂ ಕಲಬುರಗಿ ಮದ್ಯ ಇರುವ ಧಾಬಾದ ಮೇಲೆ ದಾಳಿ ಮಾಡಿದಾಗ ಅಲ್ಲಿದ್ದ ಇಬ್ಬರು ಓಡಿ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಅಲ್ಲಿದ್ದ ಮದ್ಯವನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಮು.ಮಾ.ಗಳನ್ನು ರಾಸಾಯನಿಕ ಪರಿಕ್ಷೆಗೆ ಜಪ್ತಿಪಡಿಸಿಕೊಂಡು ರಾಸಾಯನಿಕ ಪರಿಕ್ಷೆಗೆ ಮು.ಮಾ.ಗಳನ್ನು ನಾನೇ ತೆಗೆದುಕೊಂಡು ರಾಯಚೂರಿಗೆ ಹೋಗಿ ಮರಳಿ ವರದಿಯನ್ನು ತಂದು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.